ಶ್ರೀ ಪಿ. ವೆಂಕಟರಮಣ.—ಅಧ್ಯಕ್ಷರೆ ರಾಜ್ಯದಲ್ಲಿ ವಿದ್ಯಾರ್ಥಿ ನಿಲಯಗಳು ಅನೇಕ ಕಡೆ ಇವೆ. ಅನೇಕ ಕಡೆ ವಿದ್ಯಾರ್ಥಿ ನಿಲಯಗಳು ಬಾಡಿಗೆ ಕಟ್ಟಡಗಳಲ್ಲಿ ನಡೆಯುತ್ತಿವೆ, ಕೆಲವು ಸ್ವಂತಕಟ್ಟಡದಲ್ಲಿ ಇವೆ.

ಶ್ರೀ ಆರ್. ಸಿ. ಬಾಳೇಕುಂದರಗಿ.—ನಮ್ಮ ಕ್ಷೇತ್ರದಲ್ಲಿ ಅನೇಕ ಸಹಾಯಧನ ಪಡೆಯುವ ಖಾಸಗೀ ವಿದ್ಯಾರ್ಥಿನಿಲಯಗಳು ಇವೆ. ಇವುಗಳಲ್ಲಿ ಕಟ್ಟಡ ಕಟ್ಟುವುದಕ್ಕೆ ಸರ್ಕಾರ ಹಣ ಕೊಡುತ್ತಾ ಇಲ್ಲ. ಬೈಲಹೊಂಗಲದ ಮಹಾತ್ಮಾ ಗಾಂಧಿ ವಿದ್ಯಾರ್ಥಿನಿಲಯಕ್ಕೆ ಕಟ್ಟಡ ಕಟ್ಟಲು ಸಹಾಯ ಧನ ಕೊಡುವ ಯೋಜನೆ ಇದೆಯೇ?

ಶ್ರೀ ಪಿ. ವೆಂಕಟರಮಣ —ಬೈಲಹೊಂಗಲ ಮಹಾತ್ಮಾ ಗಾಂಧಿ ವಿದ್ಯಾರ್ಥಿ ನಿಲಯಕ್ಕೆ ಸರ್ಕಾರದಿಂದ ೨೫ ಸಾವಿರ ರೂಪಾಯಿಗಳ ಸಹಾಯಧನವನ್ನು ದಿನಾಂಕ ೨೩-೨-೧೯೮೦ರ ಆಜ್ಞೆಯ ಮೂಲಕ ಮಂಜೂರು ಮಾಡಿದ್ದೇವೆ. ಉಳಿದ ಹಣವನ್ನು ಜಿಲ್ಲಾಧಿಕಾರಿಗಳಿಂದ ವರದಿ ಬಂದ ಮೇಲೆ ಕಾನೂನು ರೀತ್ಯ ಬಿಡುಗಡೆ ಮಾಡುತ್ತೇವೆ.

ಶ್ರೀ ಆರ್. ಸಿ. ಬಾಳೇಕುಂದರಗಿ.—ಇಲ್ಲಿನ ಕಟ್ಟಡ ಕಾರ್ಯ ಅರ್ಧಕ್ಕೆ ನಿಂತಿದೆ. ೭೫ ಸಾವಿರ ರೂಪಾಯಿಯನ್ನು ಸಂಸ್ಥೆ ಖರ್ಚು ಮಾಡಿದೆ. ಮಂಜೂರಿನ ಮಳೆಗಾಲ ಬರುವುದರೊಳಗೆ ಕಟ್ಟಡದ ಕಾರ್ಯ ಮುಗಿಯಬೇಕು. ಅಷ್ಟರೊಳಗೆ ಹಣವನ್ನು ಬಿಡುಗಡೆ ಮಾಡುತ್ತೀರಾ?

ಶ್ರೀ ಪಿ. ವೆಂಕಟರಮಣ.—ಬೆಳಗಾಂ ಜಿಲ್ಲಾಧಿಕಾರಿಯವರಿಂದ ವರದಿ ತರಿಸಿ ಮಾನ್ಯ ಸದಸ್ಯರು ಹೇಳಿದ್ದು ಸರಿಕಂಡುಬಂದರೆ ಖಂಡಿತವಾಗಿ ಹಣ ಬಿಡುಗಡೆ ಮಾಡುತ್ತೇವೆ.

Allotment of Government Quarters in Mangalore

656 SRI K. RAMBHATT (Puttur) Will the Minister for Public Works be pleased to state.

(a) the rules that are followed by Government for allotment of Govt. Quarters for the Government Servants constructed at Berebylu, Bondelu and Kojatha Bylu in Mangalore:

(b) the total number of quarters in the said places and the number of houses allotted to employees of the various Government Departments:

(c) with whom the power of allotment of houses vests the number of meetings conducted by him for last five year?

SRI KAGODU THIMMAPPA(Minister for Public works).—

(a) The allotment of quarters are being made considering the registration number of application of employees, seniority and condition of Government servant for eligibility etc, preference being given to employees who have come from outside the district.

(b) Government Quarters meant for allotment Goverument Employees are.—

1	Berebylu	...	189
2	Bondelu	...	53
3	Kunjatha Bylu	...	35
	Total		277

The number of quarters allotted to various Departments are.—

1	Revenue	...	46
2	PWD	...	36
3	Fisheries	...	10
4	Courts	...	11
5	Police	...	19
6	Transport	...	11
7	Town Planning	...	05
8	Education-Including Government college & Technical College)	...	66
9	Health	...	16
10	Co-operation Department	...	5
11	Forest	...	2
12	Excise	...	4
13	Mines & Minerals	...	2
14	Horticulture	...	3
15	Social Welfare Department	...	4
16	Tax Department	...	6
17	Land Aquisition Department	...	4
18	Information & Publicity Department	...	1
19	Drugs Control Department	...	2
20	Survey Department	...	2
21	Local Audit	...	2
22	Agriculture Department	...	2
23	Treasury	...	5
24	Commerce and Industries	...	3
25	Finance Coporation	...	1
26	Government Text Book Depot.	...	1
27	Library	...	2
28	Bureau of Economics and Statistics	...	2
29	Registration	...	2
30	Weights and Measures	...	1
31	Employment Exchange	...	1
	Total		277

(c) Quarters are being allotted by the District Housing Allot ment Committee coustituted under the Chairmanship of the Deputy Commissioner.

28 Meetings were conducted during the last 5 years.

ಶ್ರೀ ಕೆ. ರಾಮಭಟ್.—ಅಧ್ಯಕ್ಷರೆ, ನಾನು ಈ ಪ್ರಶ್ನೆಯನ್ನು ೧೯೭೯ರಲ್ಲಿ ಕೇಳಿದ್ದು. ಈಗ ಉತ್ತರ ಬಂದಿದೆ. ಮಾನ್ಯ ಮಂತ್ರಿಗಳು ಏನು ಉತ್ತರವನ್ನು ಒದಗಿಸಿದ್ದಾರೆ ಅದು ಯಾವ ತಾರೀಖಿನ ವರೆಗಿನದು ಎಂದು ನಾನು ಕೇಳಬಯಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಅಧ್ಯಕ್ಷರೆ, ೨೧-೩-೧೯೮೦ ರವರೆಗೆ ಇಲ್ಲಿ ಉತ್ತರವನ್ನು ಕೊಡ ಲಾಗಿದೆ.

ಶ್ರೀ ಕೆ. ರಾಮಭಟ್.—ಮನೆಗಳನ್ನು ಹಂಚುವ ಜಿಲ್ಲಾ ವಸತಿಗೃಹ ವಿತರಣಾ ಸಮಿತಿಯಲ್ಲಿ ಯಾರು ಯಾರು ಸದಸ್ಯರಿದ್ದಾರೆ?

ಶ್ರೀ ಕಾಗೋಡು ತಿಮ್ಮಪ್ಪ.—ಜಿಲ್ಲಾಧಿಕಾರಿಗಳು, ಸ್ಥಳೀಯ ಎಕ್ಸಿಕ್ಯೂಟಿವ್ ಎಂಜಿನಿಯರ್ ಹಾಗೂ ಸೂಪರಿಂಡೆಂಡೆಂಟ್ ಆಫ್ ಪೋಲೀಸ್ ಇವರುಗಳು ಇರುತ್ತಾರೆ.

ಶ್ರೀ ಕೆ. ರಾಮಭಟ್.—ಇಲ್ಲಿ ಅಲಾಟ್‌ಮೆಂಟ್ ಮಾಡಿದ ಸಂಖ್ಯೆಯನ್ನು ಕೊಟ್ಟಿದ್ದೀರಿ. ಒಟ್ಟು ಎಷ್ಟು ಅರ್ಜಿಗಳು ಬಂದಿದ್ದವು ಎಂಬುದನ್ನು ಹೇಳುತ್ತೀರಾ?

ಶ್ರೀ ಕಾಗೋಡು ತಿಮ್ಮಪ್ಪ.—ಅಧ್ಯಕ್ಷರೆ, ಮನೆಗಳನ್ನು ಒಂದು ದಿವಸದಲ್ಲಿಯೇ ಹಂಚಿದ್ದು ಅಲ್ಲ ಬಹಳ ದಿವಸಗಳಿಂದ ಇವುಗಳನ್ನು ಹಂಚುತ್ತಾ ಬರಲಾಗಿದೆ. ಇಲ್ಲಿ ಯಾವ ಯಾವ ಇಲಾಖೆಗಳಿಗೆ ಎಷ್ಟೆಷ್ಟು ವಸತಿ ಗೃಹಗಳು ಸೇರಿವೆ ಎಂಬುದನ್ನು ಹೇಳಿದ್ದೇನೆ. ಹಂಚಲು ಒಂದು ವರ್ಷ ಎರಡು ವರ್ಷ ಹಿಡಿಯುತ್ತದೆ, ವಸತಿಗೃಹ ಖಾಲಿಯಾದಾಗ ಅರ್ಜಿದಾರರಿಗೆ ಅದನ್ನು ಹಂಚಲಾಗುತ್ತದೆ.

ಶ್ರೀ ಕೆ. ರಾಮಭಟ್.—ಸರ್ಕಾರದಲ್ಲಿ ಬೇರೆ ಬೇರೆ ಇಲಾಖೆಗಳು ಉಂಟು. ಈ ಮನೆಗಳನ್ನು ಹಂಚುವ ವ್ಯವಸ್ಥೆ ಬೇರೆ ಬೇರೆ ಇಲಾಖೆಗಳ ಕೈಯ್ಯಲ್ಲಿ ಇದೆಯೇ?

ಶ್ರೀ ಕಾಗೋಡು ತಿಮ್ಮಪ್ಪ.—ಇದು ಬೇರೆಬೇರೆ ಇಲಾಖೆಯವರ ಕೈಯ್ಯಲ್ಲಿ ಇಲ್ಲ. ಒಬ್ಬರ ಹತ್ತಿರವೇ ಇದೆ. ಇದು ಪಿ.ಡಬ್ಲ್ಯೂ.ಡಿ. ಇಲಾಖೆಯ ಮೇಲ್ವಿಚಾರಣೆಯಲ್ಲಿದೆ. ಯಾವ ಮನೆ ಯಾವ ಇಲಾಖೆಗೆ ಸಂಬಂಧಪಟ್ಟ ಯಾರಿಗೆ ಕೊಡಬೇಕೆಂದು ಸಮಿತಿ ತೀರ್ಮಾನ ಮಾಡುತ್ತದೆ.

ಶ್ರೀ ಕೆ. ರಾಮಭಟ್.—ನಾನು ಈ ಪ್ರಶ್ನೆ ಕೇಳುವುದಕ್ಕೆ ಕಾರಣ ಏನೆಂದರೆ, ರೆವಿನ್ಯೂ ಇಲಾಖೆಯ ನೌಕರರಿಗೇ ಆದ್ಯತೆ ಕೊಟ್ಟು ಮನೆಗಳನ್ನು ಹಂಚಲಾಗುತ್ತಿದೆ ಎನ್ನುವ ಆಪಾದನೆ ಇದೆ. ಆದ್ದರಿಂದ ಯಾವ ಯಾವ ಇಲಾಖೆಗೆ ಎಷ್ಟೆಷ್ಟು ಮನೆಗಳನ್ನು ಹಂಚಲಾಗಿದೆಯೆಂದು ಕೇಳಿದೆ. ಮನೆಗಳನ್ನು ಹಂಚುವ ಬಗ್ಗೆ ಹಿಂದಿನ ಐದು ವರ್ಷಗಳಲ್ಲಿ ೨೮ ಬಾರಿ ಸಭೆ ನಡೆದಿದೆಯೆಂದು ಮಾನ್ಯ ಮಂತ್ರಿಗಳು ತಿಳಿಸಿದ್ದಾರೆ. ಆದರೆ ನಾಮಕಾವಸ್ತೆ ಸಭೆ ನಡೆಸಿ ರೆವೆನ್ಯೂ ಇಲಾಖೆಯ ನೌಕರರಿಗೆ ಆದ್ಯತೆ ನೀಡಿ ಮನೆಗಳನ್ನು ಹಂಚ ಲಾಗಿದೆಯೆಂಬ ಆಪಾದನೆ ಇದೆ.

ಶ್ರೀ ಕಾಗೋಡು ತಿಮ್ಮಪ್ಪ.—ಅಧ್ಯಕ್ಷರೆ, ಈ ಸಮಿತಿಯಲ್ಲಿ ಜಿಲ್ಲಾಧಿಕಾರಿಗಳೇ ಇರುತ್ತಾರೆ. ಸೂಪರಿಂಟೆಂಡೆಂಟ್ ಆಫ್ ಪೋಲೀಸ್ ಹಾಗೂ ಎಕ್ಸಿಕ್ಯೂಟಿವ ಎಂಜಿನಿಯರ ಅವರು ಇರುತ್ತಾರೆ. ಇಡೀ ಜಿಲ್ಲಾ ಮೇಲ್ವಿಚಾರಕರಾದ ಜಿಲ್ಲಾಧಿಕಾರಿಗಳು ಇರಬೇಕಾದರೆ ಅವರು ಸ್ವಾಭಾವಿಕವಾಗಿ ಪ್ರಶ್ನೆ ಬಂದಾಗ ಅದನ್ನು ನೋಡಿಕೊಳ್ಳುತ್ತಾರೆ. ಅವರೇ ಇರುವಾಗ ಇಲ್ಲಿ ಅನ್ಯಾಯ್ಯ ಆಗಿದೆ ಎನ್ನುವ ಪ್ರಶ್ನೆ ಬರುವುದಿಲ್ಲ.

Collection of Beggar Tax in Hubli Dharwad.

50. SRI M. G. JARATARGAR (Hubli).—Will the Minister for Social Welfare and Backward Classes be pleased to state.—

(a) whether it has come to the notice of Government that the Hubli-Dharwad Metropolitan is collecting beggar tax from the citizens of the said City.

(b) If so, the amount of beggar tax collected for last four years.

(c) whether it has come to the notice of Government that the beggar menace has considerably increasing day by day in in said cities and thereby causing grave concern to the citizens.